**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ**

**ಸಿಸಿ ನಂಃ 149/2023**

**ಪಿರ್ಯಾದಿ** ಃ **ರಾಜ್ಯ ಸರ್ಕಾರ ಹಲಗೂರು ಪೊಲೀಸ್ ಮುಖೇನ**

- ವಿರುದ್ಧ -

**ಆರೋಪಿ** ಃ

1. **ಪ್ರಜ್ವಲ್ ಜಿ.ಕೆ.**
   ಬಿನ್ ಕೃಷ್ಣ
   ವಯಸ್ಸು: 24 ವರ್ಷ,

2. **ಮನೋಜ್ ಕುಮಾರ್ ಜಿ.ಕೆ.**
   ಬಿನ್ ಕೃಷ್ಣ
   ವಯಸ್ಸು: 23 ವರ್ಷ,

3. **ಕೃಷ್ಣ ಜಿ.ಎಂ.**
   ಬಿನ್ ಮಾಯೀಗೌಡ
   ವಯಸ್ಸು: 50 ವರ್ಷ,

4. **ಜಯಲಕ್ಷ್ಮೀ**
   ಕೋಂ ಕೃಷ್ಣ ಜಿ.ಎಂ.
   ವಯಸ್ಸು: 45 ವರ್ಷ,

**ಎಲ್ಲರ ವಾಸ**: ವಲಗೆರೆದೊಡ್ಡಿ ಗ್ರಾಮ,
ಹಲಗೂರೂ ಹೋಬಳಿ,
ಮಳವಳ್ಳಿ ತಾಲ್ಲೂಕು.

## ದೋಷಾರೋಪಣೆ

ಶ್ರೀ ಮಹೇಂದ್ರ ಎಂ. ಬಿ.ಎ. ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಮಳವಳ್ಳಿ ಆದ ನಾನು, ಮೇಲ್ಕಂಡ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಗುರಿಪಡಿಸುವುದೇನೆಂದರೆ

ಮಳವಳ್ಳಿ ತಾಲ್ಲೂಕು ಹಲಗೂರು ಪೋಲೀಸ್ ಠಾಣಾ ಸರಹದ್ದಿನ ಹಲಗೂರು ಟೌನ್, ಜೆ.ಪಿ.ಎಂ. ಬಡಾವಣೆ ಚನ್ನಪಟ್ಟಣ ರಸ್ತೆಯಲ್ಲಿರುವ ಚಾಸಾ 9ರವರ ಬಾಬ್ತು ಖಾತೆ ಸಂಖ್ಯೆ 1477 ರಲ್ಲಿ ಎಂ.ಹೆಚ್.ಎಂ. ಕಾಂಪ್ಲೆಕ್ಸ್ ನಲ್ಲಿ ಚಾಸಾ 1 ರವರು ನಾಗವಿಜಯ ಟ್ರೇಡರ್ಸ್

ಎಂಬ ಹೆಸರಿನಲ್ಲಿ ಸಿಮೆಂಟ್ ಅಂಗಡಿಯನ್ನು ಇಟ್ಟು ಅದರಲ್ಲಿ ಸಿಮೆಂಟ್ ಮೂಟೆಗಳ ಮಾರಾಟ, ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳಲು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿ 1 ಮತ್ತು 2ನೇ ಆರೋಪಿಗಳಾದ ನಿಮ್ಮನ್ನು ನೇಮಕ ಮಾಡಿದ್ದು, ನೀವುಗಳು ದಿನಾಂಕ 01.08.2021 ರಿಂದ 31.08.2022ರವರೆಗೆ ರೂ. 35,23,774=00 ಹಾಗೂ ಡಿಸ್ಕೌಂಟ್ ರೂ. 6,77,238=00 ಹಾಗೂ ಜಿ.ಎಸ್.ಟಿ. 28% ಒಳಗೊಂಡಂತೆ ವಹಿವಾಟನ್ನು ನಡೆಸಿದ್ದು, ಒಟ್ಟು ಮೊತ್ತ ರೂ. 3,98,820=00 ಖರ್ಚಾಗಿದ್ದು, ಉಳಿದ ರೂ. 38,02,192=00 ಬರಬೇಕಿದ್ದು, ಈ ಪೈಕಿ ರೂ. 10,38,383=00 ಗಳಲ್ಲಿ ರೂ. 4,50,800=00 ಗಳನ್ನು ಮಾಲೀಕರಾದ ಚಾಸಾ 1 ರವರಿಗೂ ಹಾಗೂ ಜೆ.ಎಸ್.ಜಿ.ಗೆ ರೂ. 5,87,583=00 ಗಳನ್ನು ಪಾವತಿಸಿದ್ದು, ಉಳಿದ ರೂ 27,63,809=00 ಹಣವನ್ನು ಚಾಸಾ 1 ರವರಿಗೆ ಪಾವತಿಸದೇ ನಿಮ್ಮಲ್ಲಿ ಇಟ್ಟುಕೊಂಡು ಸ್ವಂತಕ್ಕೆ ಬಳಸಿಕೊಂಡು ಹಣ ದುರುಪಯೋಗ ಪಡಿಸಿಕೊಂಡಿದ್ದು, ಆ ಮೂಲಕ ಈ ನ್ಯಾಯಾಲಯದ ಸಂಜ್ಞಾನದೊಳಗೆ ಐಪಿಸಿ ಕಲಂ 408 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾದ ಎಸಗಿದ್ದೀರಿ ಎಂದು ಆರೋಪಿಸಿದೆ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿ 1 ಮತ್ತು 2ನೇ ಆರೋಪಿಗಳಾದ ನೀವುಗಳು 27,63,809=00 ಹಣವನ್ನು ಚಾಸಾ 1 ರವರಿಗೆ ಪಾವತಿಸದೇ ನಿಮ್ಮಲ್ಲಿ ಇಟ್ಟುಕೊಂಡು ಸ್ವಂತಕ್ಕೆ ಬಳಸಿಕೊಂಡು ಚಾಸಾ 1ರವರಿಗೆ ಮೋಸ ಎಸಗಿದ್ದು, ಆ ಮೂಲಕ ಈ ನ್ಯಾಯಾಲಯದ ಸಂಜ್ಞಾನದೊಳಗೆ ಐಪಿಸಿ ಕಲಂ 420 ಸಹವಾಚಕ ಕಲಂ 34ರ ರೀತ್ಯಾ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂದು ಆರೋಪಿಸಿದೆ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿ 1 ಮತ್ತು 2ನೇ ಆರೋಪಿಗಳಾದ ನೀವುಗಳು

27,63,809=00 ಹಣವನ್ನು ಚಾಸಾ 1 ರವರಿಗೆ ಪಾವತಿಸದೇ ನಿಮ್ಮಲ್ಲಿ ಇಟ್ಟುಕೊಂಡು ಸ್ವಂತಕ್ಕೆ ಬಳಸಿಕೊಂಡು ಚಾಸಾ 1ರವರಿಗೆ ನಂಬಿಕೆ ದ್ರೋಹ ಮಾಡಿದ್ದು, ಆ ಮೂಲಕ ಈ ನ್ಯಾಯಾಲಯದ ಸಂಜ್ಞಾನದೊಳಗೆ ಐಪಿಸಿ ಕಲಂ 406 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂದು ಆರೋಪಿಸಿದೆ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿ 1 ಮತ್ತು 2ನೇ ಆರೋಪಿಗಳಾದ ನೀವುಗಳು 27,63,809=00 ಹಣವನ್ನು ಚಾಸಾ 1 ರವರಿಗೆ ಪಾವತಿಸದೇ ನಿಮ್ಮಲ್ಲಿ ಇಟ್ಟುಕೊಂಡು ಮೋಸ ಮಾಡಿ, ಸದರಿ ಹಣದ ಬಗ್ಗೆ ಬೇರೆಯವರಿಗೆ ಗೊತ್ತಾಗದ ರೀತಿಯಲ್ಲಿ ಮುಚ್ಚಿಟ್ಟಿರುತ್ತೀರಿ. ಆ ಮೂಲಕ ಈ ನ್ಯಾಯಾಲಯದ ಸಂಜ್ಞಾನದೊಳಗೆ ಐಪಿಸಿ ಕಲಂ 424 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂದು ಆರೋಪಿಸಿದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿಂತೆ ಮಾರ್ಚ್ 2022ರಲ್ಲಿ ಚಾಸಾ 6 ರವರ ಮನೆಯ ಬಳಿ ಚಾಸಾ 6ರವರು ಮಾತುಕತೆ ನಡೆಸಿದ ಸಂದರ್ಭದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿ 3 ಮತ್ತು 4ನೇ ಆರೋಪಿಗಳಾದ ನೀವುಗಳು ಚಾಸಾ 2ರವರ ಕತ್ತಿನ ಪಟ್ಟಿಯನ್ನು ಹಿಡಿದು ಎಳೆದಾಡಲು ಪ್ರಯತ್ನಿಸಿ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡಿರುತ್ತೀರಿ. ಆ ಮೂಲಕ ಈ ನ್ಯಾಯಾಲಯದ ಸಂಜ್ಞಾನದೊಳಗೆ ಐಪಿಸಿ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂದು ಆರೋಪಿಸಿದೆ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿ 3 ಮತ್ತು 4ನೇ ಆರೋಪಿಗಳಾದ ನೀವುಗಳು ಚಾಸಾ 2ರವರ ಕತ್ತಿನ ಪಟ್ಟಿಯನ್ನು ಹಿಡಿದು ನೀನು ಏನು ಮಾಡುತ್ತೀಯಾ ಮಾಡಿಕೋ ನಮ್ಮ ಮಕ್ಕಳ ಕೈಲಿ ಒಂದು ರೂಪಾಯಿಯನ್ನು ಇಸ್ಕೋಳಲು ಆಗೋಲ್ಲ ನೀನೇನಾದರೂ ಮುಂದುವರೆದರೆ ನಿನಗೆ ಒಂದು ಗತಿ ಕಾಣಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಈ ನ್ಯಾಯಾಲಯದ

ಸಂಜ್ಞಾನದೊಳಗೆ  ಐಪಿಸಿ ಕಲಂ 506 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾದ ಎಸಗಿದ್ದೀರೆಂದು ಆರೋಪಿಸಿದೆ.

**(ಮಹೇಂದ್ರ.ಎಂ.)**

ದಿನಾಂಕ**: 24.03.2026.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ**

**ಸಿಸಿ ನಂಃ 149/2023**

**ಪಿರ್ಯಾದಿ** ಃ **ರಾಜ್ಯ ಸರ್ಕಾರ ಹಲಗೂರು ಪೊಲೀಸ್ ಮುಖೇನ**

- ವಿರುದ್ಧ -

**ಆರೋಪಿ** ಃ

1. **ಪ್ರಜ್ವಲ್ ಜಿ.ಕೆ.**
   ಬಿನ್ ಕೃಷ್ಣ
   ವಯಸ್ಸು: 24 ವರ್ಷ,

2. **ಮನೋಜ್ ಕುಮಾರ್ ಜಿ.ಕೆ.**
   ಬಿನ್ ಕೃಷ್ಣ
   ವಯಸ್ಸು: 23 ವರ್ಷ,

3. **ಕೃಷ್ಣ ಜಿ.ಎಂ.**
   ಬಿನ್ ಮಾಯೀಗೌಡ
   ವಯಸ್ಸು: 50 ವರ್ಷ,

4. **ಜಯಲಕ್ಷ್ಮೀ**
   ಕೋಂ ಕೃಷ್ಣ ಜಿ.ಎಂ.
   ವಯಸ್ಸು: 45 ವರ್ಷ,

**ಎಲ್ಲರ ವಾಸ**: ವಲಗೆರೆದೊಡ್ಡಿ ಗ್ರಾಮ,
ಹಲಗೂರೂ ಹೋಬಳಿ,
ಮಳವಳ್ಳಿ ತಾಲ್ಲೂಕು.

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆಗಳು ಅರ್ಥವಾಯಿತೇ?

1ನೇ ಆರೋಪಿ:

2ನೇ ಆರೋಪಿ:

3ನೇ ಆರೋಪಿ:

4ನೇ ಆರೋಪಿ:

ಪ್ರಶ್ನೆ. 2. ಮೇಲ್ಕಂಡ ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ ?

1ನೇ ಆರೋಪಿ:

2ನೇ ಆರೋಪಿ:

3ನೇ ಆರೋಪಿ:

4ನೇ ಆರೋಪಿ:

(ಮೇಲ್ಕಂಡ ಆರೋಪಣೆಗಳನ್ನು ಆರೋಪಿಳಿಗೆ ತಿಳಿದ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿಗಳು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.)

**(ಮಹೇಂದ್ರ.ಎಂ.)**

ದಿನಾಂಕ**: 24.03.2026.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**